1884ನೇ ಇಸವಿ ಅರ್ಜೀ ನಂಬರ್ 582.

ಮೃತಪಟ್ಟ ಸುಬ್ಬಣ್ಣನವರ ಆಸ್ತಿ ವಿಷಯದಲ್ಲಿ —

ಅರ್ಜೀದಾರ್ ಲಕ್ಷಮ್ಮ ವೆರಫ್ ಕೊಪ್ಪಮ್ಮ ಮೃತಪಟ್ಟ ಸದರೀ ಸುಬ್ಬಣ್ಣನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಮೈಸೂರು ಸ್ಥಳದ ಸದರೀ ಲಕ್ಷಮ್ಮ ವೆರಫ್ ಕೊಪ್ಪಮ್ಮ ಸದರೀ ವಾಸಸ್ಥರಾಗಿ ಮೃತಪಟ್ಟ ಸುಬ್ಬಣ್ಣನವರ ಜೆಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿನ ನಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಏಪ್ಲಿಕೇಷನ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷಮ್ಮ ವೆರಫ್ ಕೊಪ್ಪಮ್ಮನ ಅರ್ಜೀಯನ್ನು 1885ನೇ ಇಸವಿ ಮಾರ್ಚ್ ತಿಂಗಳು ತಾರೀಖು 16ರಲ್ಲು ಕೇಳಿಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಶೇಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಮಾರ್ಚೀ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ

ವಿ. ಯ್ಕ. ನರಸಿಂಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ನಗರ ಡಿವೀಜ್ಯ.

ನಗರ ಡಿವೀಜ್ಯ ಡಿಸ್ಟ್ರಿಕ್ಟ್ ಜಡ್ಜ್ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ದಿವಾಳಿ ಕೇಸ್ ನಂಬರ್ 109.

ದಿವಾಳಿಯಾದ ದಿಕ್ಕೀ ದೇಸೇದಾರ ಶಿವಮೊಗ್ಗಾದಲ್ಲಿರುವ ಬಾರ್ ಇಲಾಖಾ ಸಕಿಂಡ್ ಪಟಾಲಂ 9ನೇ ಕುಂಪನಿ ಹವಾಲ್ದಾರ್ ಇನ್ಸ್ಯಾಲ್ವೆಂ
ಖಾನನ ವಿಷಯದಲ್ಲಿ —

ಈ ವಿಷಯವು ನಗರಡಿವೀಜ್ಯ ಡಿಸ್ಟ್ರಿಕ್ಟ್ ಜಡ್ಜ್ರೀರವರ ಕೋರ್ಟು ರೂಬರೂ ದಿವಾಳಿಯಾದ ಇನ್ಸ್ಯಾಲ್ವೆಂಖಾನನ ಸಮಕ್ಷವಮವಲ್ಲೆಯೂ ಮತ್ತು ದಿವಾಳೀದಾರನ ಲೇಣೇದಾರರಾದ ಅಸಲಾಜಿ, ಕಪೂರಜಿ, ರಜಾಕ್ಖಾ, ಮತ್ತು ನಾಯಿಕ ಮುಸ್ತಾಖಾ ಇವರ ಯಾದುರಾಗಿ. ಯೂ ವರಿಯಾಫ್ತಿ ಮಾಡಲ್ಪಟ್ಟಿತು.

ಇದೇ ವಿಷಯದಲ್ಲಿ ಸ್ಕ 1885ನೇ ಇಸವಿ ಜನವರೀ 22ನೇ ತಾರೀಖಿನಲ್ಲಿ ಈ ಕೋರ್ಟಿನಿಂದ ಮಾಡಲ್ಪಟ್ಟ ಹುಕ್ಕುಂ [illegible]ರಿಗೆ, ಬಿ ಷರತ್ತಿಗೆ ವಳಪಟ್ಟು ಪಟ್ಟೀಯಲ್ಲಿ ಕಂಡ ಯಾವ ಸಾಲಗಾರಿಗೂ ಏಜರ್ ದಿವಾಳಿಯಾದವನನ್ನು ದಿವಾಳಿ ಖಾನಾದಾರಿಯಿಂದ ಸ್ವಾತಂತ್ರ್ಯ ಮಾಡಿರುವದಲ್ಲದೆ ಆಬಗ್ಯೆ ಸದರೀಯವನ್ನು ದಸ್ತಗಿರಿಮಾಡಿ ಕೈದು ಮಾಡುವದರ ಬೆಕಿಯಿಂದಲೂ ಬಿಡಗಡೇ ಮಾಡಿ ಯಿರುತ್ತೆ ಎಂ ದ ಹುಕ್ಕುಂ ಮಾಡಲ್ಪಟ್ಟು ಇದೆ.

1885ನೇ ಇಸವಿ ಫಿಬ್ರುವರೀ ತಾರೀಖು 23ರಲ್ಲು ಕೋರ್ಟು ಮೊಹರ್ ನಮ್ಮ ದಸ್ತಖತ್ತಿನಿಂ ಕೊಡಲಟ್ಟಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 20ನೇ ಜನವರೀ 1885.

ಶಿವಮೊಗ್ಗಾ ಡಿಸ್ಟ್ರಿಕ್ಟ್ ನಗರ ತಾಲ್ಲೂಕಿನಲ್ಲಿ ಹೈದರಘರ ಮತ್ತು ಲಕ್ಷ್ಮೀಪುರ ಘಾಟಿಗಳ ಟೋಲ್‌ಗೇಟ್ ಯೆಂಬ ಸ್ಥಳ ಕಟ್ಟೆಗಳಿಂಗೆ ಸ್ಕ 1885ನೇ ಇಸವಿ ಏಪ್ರಿಲ್ 1ನೇ ಮರ್ಕುಂ ಲಾಗಾಯತು, 1886ನೇ ಇಸವಿ ಮಾರ್ಚೀ 31ನೇ ಮರ್ಕುಂವರಿಗೆ ಸ್ಥ ಈ ವಸೂಲ್ಮಾಡುವ ಸ್ವಾತಂತ್ರ್ಯವು 1885ನೇ ಇಸವಿ ಮಾರ್ಚೀ ತಾರೀಖು 20ರಲ್ಲು ನಗರ ತಾಲ್ಲೂಕು ಅಮಲ್ದಾರರಿಂದ ನಗದೆ ಮೊಕ್ತಾಂನಲ್ಲು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆ.